ಪ್ರಾಣಿಗಳ ವಧೆ

ಶ್ರೀ. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ),— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್. ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪ್ರಾಣಿ ವಧಾಲಯದ (ಸ್ಲಾಟರ್ ಹೌಸ್) ಸಂಖ್ಯೆಗಳು ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ಪ್ರತಿ ದಿ ವಧೆಯಾಗುತ್ತಿರುವ ಸರಾಸರಿ ಪ್ರಾಣಿಗಳ ಪಟ್ಟಿ ಎಷ್ಟು ? (ಪ್ರಾಣಿವಾರು ವಿವರ ನೀಡುವುದು).

ಇ) ವಧೆಗೆ ಈಡಾಗಿರುವ ಪ್ರಾಣಿಗಳು ಎಂಥವು ಇರಬೇಕು ಮತ್ತು ಅನುಸರಿಸುವ ನಿಯಮಗಳೇನು ?

ಈ) ಈ ವಧೆಯಿಂದ ಒಳ್ಳೆಯ ರಾಸುಗಳು ನಾಶವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ವಸತಿ ಹಾಗೂ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳ ಸಚಿವರು).—

ಅ) ಒಟ್ಟು ೮೬೦.

ಜಿಲ್ಲಾವಾರು ಪ್ರಾಣಿ ವಧಾಲಯಗಳ ಸಂಖ್ಯೆ

೧	ಬೆಂಗಳೂರು ನಗರ	೩
೨	ಬೆಂಗಳೂರು ಗ್ರಾಮಾಂತರ	೪೫
೩	ಬೆಳಗಾಂ	೭೮
೪	ಬಳ್ಳಾರಿ	೬೨
೫	ಬೀದರ್	೬೩
೬	ಬಿಜಾಪುರ	೯೮
೭	ಚಿಕ್ಕಮಗಳೂರು	೧೫
೮	ಚಿತ್ರದುರ್ಗ	೬೨
೯	ದಕ್ಷಿಣ ಕನ್ನಡ	೫
೧೦	ಧಾರವಾಡ	೧೬೧
೧೧	ಗುಲ್ಬರ್ಗ	೨೪
೧೨	ಹಾಸನ	೩೨
೧೩	ಕೊಡಗು	೧೦
೧೪	ಕೋಲಾರ	೩೦
೧೫	ಮಂಡ್ಯ	೬೨
೧೬	ಮೈಸೂರು	೬
೧೭	ರಾಯಚೂರು	೪೨
೧೮	ಶಿವಮೊಗ್ಗ	೨೨
೧೯	ತುಮಕೂರು	೧೦
೨೦	ಉತ್ತರ ಕನ್ನಡ	೩೦
	ಒಟ್ಟು	೮೬೦

ಅ) ರಾಜ್ಯದಲ್ಲಿ ಪ್ರತಿ ದಿನ ವಧೆಯಾಗುತ್ತಿರುವ ಪ್ರಾಣಿಗಳ ಸರಾಸರಿ ಸಂಖ್ಯೆ ಈ ಕೆಳಗಿನಂತಿದೆ.

೧	ದನಗಳು	೯೩
೨	ಎಮ್ಮೆಗಳು	೫೮
೩	ಕುರಿಗಳು	೩೩೫೨
೪	ಮೇಕೆಗಳು	೨೯೧೧
೫	ಹಂದಿಗಳು	೩೯
	ಒಟ್ಟು	೬೪೫೩

ಇ) ಕರ್ನಾಟಕ ಗೋವಧೆ ಮತ್ತು ಪ್ರತಿಬಂಧಕ ಜಾನುವಾರು ಪರಿರಕ್ಷಣೆ ಕಾಯಿದೆ ೧೯೬೪ ಅಧಿನಿಯಮದಂತೆ (ಅಧಿನಿಯಮದಲ್ಲಿ ಪ್ರಾಣಿಗಳೆಂದರೆ ಹಸು ಮತ್ತು ಅದರ ಕರುಗಳನ್ನು ಹೊರತು ಪಡಿಸಿ ಇತರ ಜಾನುವಾರುಗಳು).

೧. ಹಸುಗಳನ್ನು ಮತ್ತು ಕರುಗಳನ್ನು (ಎಮ್ಮೆ ಕರು ಸೇರಿ) ವಧೆ ಮಾಡುವ ಹಾಗಿಲ್ಲ. ಆದರೆ ೧೨ ವರ್ಷ ಮೇಲ್ಪಟ್ಟು ಇತರೇ ಪ್ರಾಣಿಗಳನ್ನು ವಧೆಗಾಗಿ ಅನುಮತಿ ನೀಡಬಹುದು.

೨. ಹಸು ಮತ್ತು ಕರುಗಳನ್ನು (ಎಮ್ಮೆ ಕರು ಸೇರಿ) ಹೊರತುಪಡಿಸಿ ಇತರ ಪ್ರಾಣಿಗಳು, ಅಂಗವಿಕಾರ ಅಥವಾ ಯಾವುದೇ ಕಾರಣದಿಂದ ಕಳಿ ಸಂವರ್ಧನೆ, ಭಾರ ಎಳೆಯುವುದು ಅಥವಾ ಹಾಲು ಕೊಡುವುದು ಇಂಥ ಕ್ರಿಯೆಗಳಿಗೆ ಯೋಗ್ಯ ಆಗಿ ಅಸಮರ್ಥವಾಗಿದ್ದಾಗ ಮಾತ್ರ ವಧೆಗೆ ಅನುಮತಿ ನೀಡಬಹುದು.

೩. ವೇಲಿನ ಎರಡು ಸಂದರ್ಭಗಳಲ್ಲಿ ಈ ಬಗ್ಗೆ ಆ ಪ್ರದೇಶದ ಸಕ್ಷಮ ಪ್ರಾಧಿಕಾರಿಯು ಅಂದರೆ ಸರ್ಕಾರದ ಪಶುವೈದ್ಯ, ಪಶುವೈದ್ಯಾಧಿಕಾರಿಯಿಂದ ಪ್ರಮಾಣ ಪತ್ರ ಪಡೆದಿರಬೇಕು.

ಈ) ಬಂದಿಲ್ಲ.

ಉ) ಉದ್ಭವಿಸುವುದಿಲ್ಲ.

೧೧–೩೦ ಎ. ಎಂ.

ಶ್ರೀ ಜ್ಞಾನದೇವ ಎನ್. ದೊಡ್ಡ ಮೇಟಿ (ಲೋಣ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ಅಂಕಿ ಅಂಶವನ್ನು ಕೊಟ್ಟಿರುವುದನ್ನು ನೋಡಿದರೆ ಇದು ಸತ್ಯಕ್ಕೆ ದೂರವಾದುದು ಎಂದು ಅನಿಸುತ್ತದೆ. ಒಂದೊಂದು ಜಿಲ್ಲೆಯ ಮಾಹಿತಿಯನ್ನು ಕೊಟ್ಟಿದ್ದಾರೆ. ಒಂದು ಸಾರಿ ಸಂತೆಯೊಳಗೆ ಹಾದು ಬಂದರೆ ಎಳೆಯ ಕರುಗಳು, ಸಣ್ಣ ಹೋರಿಗಳನ್ನು ಪಶುಆಲಯಕ್ಕೆ ಕೊಂಡೊಯ್ಯುವ ಚಿತ್ರ ನನಗೆ ಕಂಡು ಬರುತ್ತದೆ. ಮಾನ್ಯ ಸಚಿವರಿಗೆ ಇದು ಮನವರಿಕೆಯಾಗಿರಬೇಕು. ಕಾನೂನನ್ನು ವೀರಿ ಮೀರಿದು ಎಲ್ಲಾ ಕಡೆ ಬಹುತೇಕ ಪ್ರಾಣಿಗಳ ವಧೆಯಾಗುತ್ತಿದೆ. ಇದೂ ಕೂಡ ತಮ್ಮ ಗಮನಕ್ಕೆ ಬಂದಿಲ್ಲ ಅಂದರೆ ಈ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಅರ್ಥವಾಗುತ್ತದೆ. ಆದ್ದರಿಂದ ಈ ಕಾನೂನನ್ನು ಚುರುಕುಗೊಳಿಸಲು ಏನು ಕ್ರಮ ತೆಗೆದು ಕೊಳ್ಳುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಮಹಮದ್ ಮೊಯಿನುದ್ದೀನ್.—ಸರಕಾರದಲ್ಲಿ ದೊರೆತಿರುವ ಮಾಹಿತಿ ಪ್ರಕಾರ ಅಂಕಿ ಅಂಶಗಳನ್ನು ನೀಡಿದ್ದೇನೆ. ಪ್ರಾಣಿಗಳು ವಧೆಯಾಗುತ್ತಿರುವುದು ಜಾಸ್ತಿಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕೆ ಕಾನೂನು ಇದೆ ಅದನ್ನು ಜಾರಿಗೆ ತರುವವರು ಪೋಲೀಸ್ ಇಲಾಖೆಯವರು. ಯಾರಾದರೂ ಕೇಸ್ ಹಾಕಿದ್ದ ಪಕ್ಷದಲ್ಲಿ ಅಥವಾ ಕಾನೂನು ಉಲ್ಲಂಘನೆ ಆಗಿದ್ದ ಪಕ್ಷದಲ್ಲಿ ೬ ತಿಂಗಳ ಜೈಲು ಅಥವಾ ಒಂದು ಸಾವಿರ ರೂಪಾಯಿ ಜುಲ್ಮಾನೆ ಅಥವಾ ಎರಡನ್ನೂ ಕಾಯಿದೆ ಮೇರೆಗೆ ವಿಧಿಸಬಹುದು. ಎಷ್ಟು ಕೇಸುಸ್ ಆಗಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಅದನ್ನು ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆ.

ಶ್ರೀ ಜ್ಞಾನದೇವ ದೊಡ್ಡ ಮೇಟಿ.—ಒಳ್ಳೆಯ ರಾಸುಗಳು ವಧಾಲಯಕ್ಕೆ ಹೋಗುತ್ತಿದೆ ಅದು ತಪ್ಪಂಗೂ ಗೊತ್ತಿದೆ. ಇದರ ಬಗ್ಗೆ ಕೇಸ್ ಹಾಕಿದ್ದಾರೋ ಇಲ್ಲವೋ ಗೊತ್ತಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈ ವಧೆಯಿಂದ ಒಳ್ಳೆಯ ರಾಸುಗಳು ನಾಶವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಎಂದು ನಾನು ಪ್ರಶ್ನೆ ಕೇಳಿದ್ದೇನೆ ಅದಕ್ಕೆ ಉತ್ತರವಾಗಿ ಬಂದಿಲ್ಲವೆಂದು ಹೇಳಿದ್ದಾರೆ. ಒಳ್ಳೆಯ ರಾಸುಗಳು ವಧಾಲಯಕ್ಕೆ ಹೋಗುತ್ತಿವೆ ಆದರೆ ಅದರ ಬಗ್ಗೆ ತಪ್ಪಂಗೆ ಮಾಹಿತಿಯನ್ನು ಕೊಟ್ಟಿಲ್ಲ ಅಂದಮೇಲೆ ಒಳ್ಳೆಯ ರಾಸುಗಳ ವಧೆಯಾಗುತ್ತಿರುವ ಬಗ್ಗೆ ಕೇಸ್ ಹಾಕಿರ ಬಹುದು ಇಲ್ಲವೇ ಹಾಕಿಲ್ಲದೇ ಇರಬಹುದು ಆದರೆ ಅದೂ ಕೂಡ ತಪ್ಪಂಗೆ ಗೊತ್ತಿಲ್ಲ. ಒಳ್ಳೆಯ ರಾಸು ಗಳು ಇವತ್ತು ನಾಶವಾಗುತ್ತಿವೆ ಅದನ್ನು ತಡೆಗಟ್ಟಲು ಜರೂರಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಒಮ್ಮೆ ಸಂತೆಯೊಳಗೆ ತಿರುಗಾಡಿ ಬನ್ನಿ ಆಗ ನಿಜಾಂಶ ನಿಮಗೆ ಗೊತ್ತಾಗುತ್ತದೆ. ನರೇಗಲ್‌ನಿಂದ ಗದಗ್‌ಗೆ ಹೋಗಬೇಕಾದರೆ ಆ ಹಾದಿಯಲ್ಲಿ ಬಹಳ ಉತ್ತಮವಾದ ರಾಸುಗಳು ಹೋಗುತ್ತವೆ ಇದನ್ನು ತಾವು ನೋಡಬಹುದು.ನಾನು ಉದಾಹರಣೆಗೆಂದು ಇದನ್ನು ಹೇಳಿದ್ದೇನೆ. ನಾರಾಯಣಪುರ ಎಂಬಲ್ಲಿ ಸಾವಿರಾರು ದನಗಳು, ಕರುಗಳು ರಾತ್ರಿ ಹೊತ್ತು ಮಂಚಾಜಾವಿನಲ್ಲಿ ಹೋಗುತ್ತವೆ. ಅದು ಮಾನ್ಯ ಕೆ. ಹೆಚ್. ಪಾಟೀಲರಿಗೂ ಕೂಡಾ ಗೊತ್ತಿದೆ. ಉತ್ತಮ ರಾಸುಗಳು ನಾಶವಾಗುತ್ತಿವೆ. ಮಾನ್ಯ ಮಂತ್ರಿಗಳು ಕೊಟ್ಟಿರ ತಕ್ಕಂಥ ಅಂಕಿ ಸಂಖ್ಯೆಯನ್ನು ನೋಡಿದರೆ ಬಹುತೇಕವಾಗಿ ಯಾರೂ ದನಗಳನ್ನು ತಿನ್ನುವುದಿಲ್ಲವೇನೋ ಎನ್ನುವ ಹಾಗೆ ಇದೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಅಧ್ಯಕ್ಷರೇ, ಈ ಆಕ್ಟ್‌ನ್ನು ಜಾರಿಗೆ ತರಬೇಕಾಗಿರುವುದು ಪೋಲೀಸ್ ಇಲಾಖೆಯವರು, ಪೋಲೀಸ್ ಇಲಾಖೆಯವರಿಗೆ ಇಂಥ ವಿಚಾರಗಳ ಬಗ್ಗೆ ಅದಷ್ಟು ಜಾಗ್ರತೆ ಇರಬೇಕು ಮತ್ತು ಉತ್ತಮವಾದ ರಾಸುಗಳನ್ನು ಪ್ರಾಣಿಗಳನ್ನು ಎಲ್ಲೇ ಆಗಲಿ ಕಡೆಯ ಬಾರದು ಎನ್ನುವ ಬಗ್ಗೆ ಆದೇಶ ನೀಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ವೇದಾಂತ ಹೆಬ್ಬಾಗಿ.—ಈ ಪ್ರಾಣಿ ವಧೆ ಮಾಡುವವರು ಎಂಥವರು ಇರಬೇಕು ? ಅವರಿಗೆ ಕ್ವಾಲಿಫಿಕೇಷನ್ ಇದರ ಬಗ್ಗೆ ಏನಾದರೂ ಇದೆಯೇ ? ಎರಡನೆಯದು ಈ ಪ್ರಾಣಿ ವಧೆ ಮಾಡುವುದಕ್ಕೆ ನೂತನವಾಗಿ ಆಧುನಿಕವಾಗಿ ಎಲ್ಲಿಯಾದರೂ ಕೂಡಾ ಯಂತ್ರಗಳನ್ನು ಜೋಡಿಸಿದ್ದೀರಾ ? ಮೂರನೆಯದು ಈ ವಧೆ ಮಾಡುವ ಪ್ರಾಣಿಗಳಲ್ಲಿ ಯಾವ ಪ್ರಾಣಿಯ ಮಾಂಸ ರುಚಿ ಜಾಸ್ತಿ ?

ಶ್ರೀ ಮೊಹಮ್ಮದ್ ಮೊಹಿನುದ್ದೀನ್.—ಸ್ವಾಮಿ, ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ನೀಡುತ್ತೇನೆ.

ಉಪಾಧ್ಯಕ್ಷರು.—ಶ್ರೀ ವಿನಯಕುಮಾರ್ ಸೊರಕೆ.—ಗೈರುಹಾಜರಿ—

ಶ್ರೀ ರಂಗದೇವರಾಯಲು.—ಗೈರುಹಾಜರಿ—

ಹರಪನಹಳ್ಳಿಯಲ್ಲಿರುವ ಪಶುವೈದ್ಯಶಾಲೆಯನ್ನು ಮೇಲ್ದರ್ಜೆಗೇರಿಸುವುದು

೨೦೫೯ ಶ್ರೀ ಬಿ ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ವಕ್ಫ್ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತೆಲಗಿ ಮತ್ತು ಕವಿತಹಳ್ಳಿ ಗ್ರಾಮಗಳಲ್ಲಿರುವ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—(ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ಇಲ್ಲ. (ಸರ್ಕಾರದ ಪರಿಶೀಲನೆಯಲ್ಲಿಲ್ಲ)

ಶ್ರೀ ಬಿ. ಹೆಚ್. ಯಂಕಾನಾಯಕ್.— ಮಾನ್ಯ ಉಪಾಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ "ಸರ್ಕಾರದ ಪರಿಶೀಲನೆಯಲ್ಲಿಲ್ಲ" ಎಂದು ಹೇಳಿದ್ದಾರೆ. ಈ ಆಸ್ಪತ್ರೆ ಓಪನ್ ಆಗಿದ್ದು ೧೯೬೮-೬೯ನೇ ಈ ಆಸ್ಪತ್ರೆಗಳು ಸರ್ಕಾರದ ಲೆಕ್ಕದಲ್ಲಿಲ್ಲವೇ ? ಡಿ. ಸಿ. ಲೆಕ್ಕದಲ್ಲಿ ಏನಾದರೂ ಇದೆಯೇ ? ಉತ್ತರದ